# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:5008/2022** ಪ್ರಾ.ಸಾ-4

ಚಾಸಾ-4

ದಿನಾಂಕ:15-04-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ನಿಂಗಪ್ಪ |
| **ತಂದೆಯ ಹೆಸರು** | ಅಂಕಪ್ಪ |
| **ವಯಸ್ಸು** | 60 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ಗರಣಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-</u>**

ಸಿದ್ದಪ್ಪ ಮತ್ತು ಅಲುವೇಲಮ್ಮ ಗೊತ್ತು. ಅವರು ನಮ್ಮ ಊರಿನವರು. ಗರಣಿ ಗ್ರಾಮದ ಸರ್ವೆ ನಂಬರ್.427/13 ರ ಬಗ್ಗೆ ವಿವಾದ ಇರುವ ವಿಚಾರ ನನಗೆ ಗೊತ್ತಿಲ್ಲ. ಸಿದ್ದಪ್ಪ ಮತ್ತು ನನ್ನ ಮಧ್ಯ ಯಾವುದೇ ವ್ಯವಹಾರ ಇಲ್ಲ. ನಾನು ಸಿದ್ದಪ್ಪನಿಗೆ ಒಂದು ವರೆ ಲಕ್ಷ ನೀಡಿದ್ದೆ. ಊರ ಮಗ್ಗಲದಲ್ಲಿ ಇದ್ದ ಹೊಲದ ವಿಚಾರದಲ್ಲಿ ಒಂದು ವರೆ ಲಕ್ಷ ನೀಡಿದ್ದೆ. ನಾನು ಮತ್ತು ಸಿದ್ದಪ್ಪನ ಅಪ್ಪ ಆ ಹೊಲವನ್ನು ಅವನ ತಂದೆಯ ಕಡೆಯಿಂದ ಕೊಂಡಿದ್ದೆವು. ಸಿದ್ದಪ್ಪ ಜಮೀನನ್ನು ನನಗೆ ಬರೆದುಕೊಡುತ್ತೇನೆ ಎಂದು ಹೇಳಿದ್ದರಿಂದ ಒಂದು ವರೆ ಲಕ್ಷ ಹಣ ನೀಡಿದ್ದೆ. ಖರ್ಚು ಇಟ್ಟು ಕೊಂಡು ಹೊಲವನ್ನು ಬರೆದುಕೊಡಬೇಕು ಎಂದು ಹೇಳಿದ್ದೆ. ಈಗಲೂ ಬರೆದುಕೊಟ್ಟಿಲ್ಲ. ಈ ವಿಚಾರ ಸಿದ್ದಪ್ಪನ ಹೆಂಡತಿಗೆ ಗೊತ್ತಿತ್ತೊ ಇಲ್ಲವೊ ನನಗೆ ಗೊತ್ತಿಲ್ಲ. ಸಿದ್ದಪ್ಪನ ಹೆಂಡತಿ ಈಗ

ಬದುಕಿಲ್ಲ. ಹೇಗೆ ಸತ್ತಳು ಎಂದು ನನಗೆ ಗೊತ್ತಿಲ್ಲ. ಸಾವಿಗೆ ಯಾರು ಕಾರಣ ಎಂದು ಕೂಡ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಪ್ರಶ್ನೆ ಮಾಡಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :-**

ನಾನು ರೂ.1,40,000/- ಹಣ ಸಿದ್ದಪ್ಪನಿಗೆ ನೀಡಿದ್ದೆ, ಪಂಚಾಯತಿಯಲ್ಲಿ ಒಪ್ಪಿದಂತೆ ಉಳಿದ ಹಣ 60 ಸಾವಿರ ಇಲ್ಲದೆ ಮಾಡಿಕೊಡುತ್ತೇನೆ ಎಂದು ಸಿದ್ದಪ್ಪ ಒಪ್ಪಿದ್ದ ಆದರೆ ಅವನ ಹೆಂಡತಿ ಅಲುವೇಲಮ್ಮ ಅದಕ್ಕೆ ಒಪ್ಪದೆ ದುಡ್ಡು ಕೊಡುವ ವರೆಗೂ ರಿಜಿಸ್ಟ್ರೇಷನ ಮಾಡಿ ಕೊಡುವುದು ಬೇಡ ಎಂದು ಹೇಳಿದಳು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರದಲ್ಲಿ ಸಿದ್ದಪ್ಪನಿಗೂ ಅವನ ಹೆಂಡತಿಗೂ ಗಲಾಟೆ ಆಗಿ ಸಿದ್ದಪ್ಪ ಅವಳಿಗೆ ಹೊಡೆದಿದ್ದ ಎಂದು ಸಿದ್ದಪ್ಪ ನನಗೆ ಹೇಳಿದ್ದ ಎಂದರೆ ಸರಿಯಲ್ಲ. ಆಗ ನಾನು ಹೆಣ್ಣು ಮಗಳಿಗೆ ಹೊಡೆಯುತ್ತೀಯಾ ಸ್ವಲ್ಪ ದಿನ ಬಿಟ್ಟು ಕೊಡು ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ದಿನಾಂಕಃ14-12-2021 ರಂದು ರಾತ್ರಿ 10ಃ00 ಗಂಟೆ ಸಮಯದಲ್ಲಿ ಮಾತು ಕೊಟ್ಟಂತೆ ನಿಂಗಪ್ಪನಿಗೆ ರಿಜಿಸ್ಟ್ರೇಷನ ಮಾಡಿಕೊಡುತ್ತೇನೆ ಎಂದು ಹೇಳಿದಾಗ ಅವರೊಳಗೆ ಗಲಾಟೆ ಆಗಿ ಅವಳನ್ನು ಕೊಲ್ಲಬೇಕೆಂದು ಸಿದ್ದಪ್ಪ ತಲೆಯನ್ನು ಗೊಡೆಗೆ ಚಚ್ಚಿದ ಬಳಿಕ ತುದಿ ಚೂಪಾಗಿರುವ ದೊಣ್ಣೆಯಿಂದ ತಲೆಗೆ, ಎದೆಗೆ ಮತ್ತು ಕುತ್ತಿಗೆಗೆ ಚುಚ್ಚಿದ್ದ ಬಳಿಕ ಮಚ್ಚು ಮತ್ತು ರಾಡ್ ನಿಂದ ಅವಳ ದೇಹದ ತಲೆ ಮತ್ತು ಮುಖಕ್ಕೆ ಹಾಗೂ ಇತರ ಭಾಗಗಳಿಗೆ ಹೊಡೆದು ಅವಳನ್ನು ಸಾಯಿಸಿದ್ದ ಮತ್ತು ಗೊತ್ತಾಗಬಾರದೆಂದು ಮನೆಯ ಮುಂದೆ ಮರಳಿನಲ್ಲಿ ಅವಳನ್ನು ಹೂತು ಹಾಕಿದ್ದ, ಅವಳು ಧರಿಸಿದ್ದ ಬಟ್ಟೆಗಳನ್ನು ಮತ್ತು ಮಾಂಗಲ್ಯ ಸರವನ್ನು ದಿಂಬು, ರಗ್ಗು, ಚಾಪೆಯನ್ನು ಮನೆಯ ಹಿಂದೆ ಸುಟ್ಟು ಹಾಕಿದ್ದ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿನಾಂಕಃ29-12-2021 ರಂದು ವಿವರವಾದ ಹೇಳಿಕೆಯನ್ನು ನೀಡಿ ಅದರಲ್ಲಿ ನನ್ನ ಮತ್ತು ಸಿದ್ದಪ್ಪನ ವ್ಯವಹಾರ ಹಾಗೂ ಅಲುವೇಲಮ್ಮನನ್ನು

ಸಿದ್ದಪ್ಪ ಕೊಂದ ವಿಚಾರ ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿನಾಂಕಃ29-12-2021 ರ ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-17 ಎಂದು ಗುರುತಿಸಲಾಯಿತು.

**ಪಾಟೀಸವಾಲು ಶ್ರೀ. SRA ವಕೀಲರಿಂದ ಆರೋಪಿ ಪರವಾಗಿಃ-**

ನನಗೂ ಸಿದ್ದಪ್ಪನಿಗೂ ಜಮೀನು ವ್ಯವಹಾರ ಇರಲಿಲ್ಲ ಎಂದರೆ ಸರಿ. ಗರಣಿ ಗ್ರಾಮದ ಸರ್ವೆ ನಂಬರ್.427/13 ರ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಕೇಸಿನ ವಿಚಾರ ನನಗೆ ಯಾವುದೇ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**